ನಾಯಿ ನಿಮ್ಮಲ್ಲೊಬ್ಬರ ಪಾತ್ರೆಯಲ್ಲಿ ಕುಡಿದರೆ, ಅವನು ಅದನ್ನು ಏಳು ಬಾರಿ ತೊಳೆಯಬೇಕಾಗಿದೆ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಾಯಿ ನಿಮ್ಮಲ್ಲೊಬ್ಬರ ಪಾತ್ರೆಯಲ್ಲಿ ಕುಡಿದರೆ, ಅವನು ಅದನ್ನು ಏಳು ಬಾರಿ ತೊಳೆಯಬೇಕಾಗಿದೆ." ಮುಸ್ಲಿಂರ ವರದಿಯಲ್ಲಿ ಹೀಗಿದೆ: "ಅದರಲ್ಲಿ ಮೊದಲನೆಯ ಬಾರಿ ಮಣ್ಣಿನಿಂದ." [صحيح] [متفق عليه]

ಪಾತ್ರೆಯೊಳಗೆ ನಾಯಿ ನಾಲಗೆಯನ್ನು ತೂರಿಸಿದರೆ, ಆ ಪಾತ್ರೆಯನ್ನು ಏಳು ಬಾರಿ ತೊಳೆಯಲು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆಜ್ಞಾಪಿಸಿದ್ದಾರೆ. ಮೊದಲನೆಯ ಬಾರಿ ತೊಳೆಯುವಾಗ ಮಣ್ಣನ್ನು ಸೇರಿಸಬೇಕು. ನಂತರ ನೀರಿನಿಂದ ಶುಚೀಕರಿಸಬೇಕು. ಇದರಿಂದ ಆ ಅಶುದ್ಧಿಯು ಮತ್ತು ಅದರಿಂದ ಉಂಟಾಗುವ ಹಾನಿಯು ಸಂಪೂರ್ಣವಾಗಿ ನಿವಾರಣೆಯಾಗುತ್ತದೆ.

http://www.sunnah.global/hadeeth/kn/show/3143